ನಿಮ್ಮವರಿಗೆಲ್ಲಿ ಕಾಣಬೇಕು. ಎಂದು ಪಕಪಕನೆ ನಕ್ಕಳು.

ಅಜ್ಜಿ... ಹಣ್ಣಿಗೂ ಮಣ್ಣಿಗೂ ಮಕ್ಕಳಿಗೂ ಬೇಧವಿಲ್ಲ. ಎಲ್ಲವೂ ಪ್ರಕೃತಿಯ ಕೊಡುಗೆ. ನಮ್ಮ ರಾಜರಿಗೆ ಈ ಹಣ್ಣಿನ ರುಚಿ ತೋರಿಸಿ ಹಣ್ಣು ಬೆಳೆಯುತ್ತೇವೆ ಎಂದ. ಸಂತಸದಿಂದ ಅಜ್ಜಿ ಬುಟ್ಟಿ ಹಣ್ಣು ಕೊಟ್ಟು ಕಳಿಸಿದಳು. ರಾಜ ಅರಮನೆಗೆ ಹೋಗಿ, ಮರುದಿನವೇ ಸಭೆ ಕರೆದ. ಇದು ಯಾವ ಹಣ್ಣು ಎಂದ. ಎಲ್ಲರೂ ಗೊತ್ತಿಲ್ಲವೆಂದರು. ಇದನ್ನು ನಮ್ಮ ರಾಜ್ಯದಲ್ಲಿಯೇ ಬೆಳೆಯುತ್ತಾರೆಯೆ ಎಂದ. ಅದಕ್ಕೂ ಇಲ್ಲವೆಂದರು. ಹಾಗಾದರೆ ನಮ್ಮ ರಾಜ್ಯದ್ದಲ್ಲದ ಈ ಹಣ್ಣನ್ನು ಬೆಳೆಸಬಹುದೋ ಎಂದ. ಅದಕ್ಕೆ ಎಲ್ಲರೂ ಓಹೋ ಓಹೋ ಅಗತ್ಯವಾಗಿ ಎಂದರು. ಕೂಡಲೇ ಓ, ನೀವೆಲ್ಲ ರಾಜಾಜ್ಞೆ ಮೀರಿದಿರಿ. ಯಾವುದೇ ಹಣ್ಣಾಗಲಿ ಮಣ್ಣಾಗಲಿ ನಮ್ಮ ರಾಜ್ಯಕ್ಕೆ ನೆರೆ ರಾಜ್ಯದಿಂದ ತರಬಾರದೆಂದು ಆಜ್ಞಾಪಿಸಿದ್ದೆ. ಒಂದು ಹಣ್ಣಿಗೆ ರಾಜಾಜ್ಞೆ ಮೀರಿದಿರಿ. ನಿಮಗೆಲ್ಲಾ ಶಿಕ್ಷೆ ಕಾದಿದೆ ಎಂದ.

ನಂತರ ರಾಜ ತಾನು ತಂದಿದ್ದ ಹಣ್ಣಿನ ಬುಟ್ಟಿಯಿಂದ ಒಬ್ಬೊಬ್ಬರಿಗೆ ಒಂದೊಂದು ಹಣ್ಣು ಕೊಟ್ಟು– 'ನೋಡಿರಿ. ನಿಮಗೆ ಕೊಟ್ಟಿರುವ ಹಣ್ಣಿನಲ್ಲಿ ವಿಷ ಬೆರೆಸಿದೆ. ರಾಜಾಜ್ಞೆ ಮೀರಿದ ನೀವು ಹಣ್ಣು ತಿಂದರೆ ಸಾಯುವಿರಿ. ತಿನ್ನದಿದ್ದರೆ ಸಾಯುವವರೆಗೂ ಕಾರಾಗೃಹ ಶಿಕ್ಷೆಯಲ್ಲಿ ನಲುಗುವಿರಿ. ಈ ಎರಡರಲ್ಲಿ ಯಾವ ಶಿಕ್ಷೆ ಬೇಕು ಆರಿಸಿಕೊಳ್ಳಿ ಎಂದ. ರಾಜನ ಮಾತಿಗೂ ಮುನ್ನವೇ ಎಲ್ಲರೂ ಹಣ್ಣನ್ನು ತಿನ್ನತೊಡಗಿದರು. ರುಚಿ ರುಚಿಯಾದ ಹಣ್ಣು. ತಿಂದರೂ ಏನೂ ಆಗಿಲ್ಲ. ಅಚ್ಚರಿಯಲ್ಲಿ ರಾಜನ ಮುಖ ನೋಡಿದರು. ಆಗ ರಾಜ – ವಿಷ ಕೊಟ್ಟು ನಿಮ್ಮನ್ನು ಸಾಯಿಸುವಷ್ಟು ಕಟುಕನಲ್ಲ ನಾನು, ಈ ಹಣ್ಣು ನೆರೆರಾಜ್ಯದ್ದು, ನಮ್ಮ ಮಕ್ಕಳಿಗೆ ಈ ಹಣ್ಣು ಇಷ್ಟ. ಈ ಹಣ್ಣನ್ನು ನಮ್ಮಲ್ಲಿಯೂ ಬೆಳೆಯಬೇಕೆನಿಸಿತು. ಹೀಗಾಗಿಯೇ ಬುಟ್ಟಿಯನ್ನೇ ಹೊತ್ತು ತಂದೆ. ನಾನೇ ನನ್ನ ಆಜ್ಞೆ ವಾಪಸ್ ತೆಗೆದುಕೊಳ್ಳುವೆ. ಈಗ ತಿಂದ ಹಣ್ಣಿನ ಈ ಬೀಜ ಹುಸಿ ಹೋಗದೆ, ಸಸಿ ನೆಟ್ಟು ಬೆಳೆಸಿರಿ. ನಮ್ಮ ನಮ್ಮ ಮಕ್ಕಳು ಹಣ್ಣು ತಿನ್ನುವಂತಾಗಬೇಕು ಎಂದ.

ರಾಜ ಹೇಳಿದಂತೆ ಹಣ್ಣು ತಿಂದವರು ಬೀಜವನ್ನು ನೆಟ್ಟು ಮರ ಬೆಳೆಸಿದರು. ಮಾವಿನ ಹಣ್ಣಿಗೆ ಕಾರಣಳಾದ ರಾಜಕುಮಾರಿಯೊಂದಿಗೆ ವಿವಾಹವಾಗಿದ್ದ ರಾಜ, ಮಾವಿನ ಮರ ನೋಡಲು ಬಂದ. ಹಣ್ಣು ತುಂಬಿದ ಮರಗಳನ್ನು ಕಂಡ. ನೋಡಿ! ನಮ್ಮ ರಾಜ್ಯದಲ್ಲೂ ಮಾವಿನ ಹಣ್ಣು ಬೆಳೆದೆವು. ಮಕ್ಕಳು ಎಲ್ಲೂ ಹೋಗಬೇಕಿಲ್ಲ. ಇಲ್ಲಿಯೇ ಹಣ್ಣು ತಿನ್ನಬಹುದು. ಹೇಳಿ ಹಣ್ಣು ಬೆಳೆದ ನಿಮಗೇನು ಬೇಕು ಬಹುಮಾನ ಎಂದ.

ಆಗ ಒಬ್ಬ ಮುಂದೆ ಬಂದು ರಾಜರೇ ನಾವು ಈ ಹಣ್ಣಿನ ಮರಕ್ಕೆ ನಾಮಕರಣ ಮಾಡುತ್ತೇವೆ. ನೀವು ಒಪ್ಪಿದರೆ ಅದೇ ಬಹುಮಾನ – ಮಹಾರಾಣಿಯವರೇ ನಮ್ಮ ಮಾವುರಾಣಿ. ಬೀಜ ಅವರ ಕಾಣಿಕೆ. ಮರ ನಿಮ್ಮ ದೇಣಿಗೆ. ನಾವು ಇದಕ್ಕೆ 'ರಾಜಮಾವು' ಎಂದು ನಾಮಕರಣ ಮಾಡುತ್ತೇವೆ ಎಂದರು. ರಾಜನಿಗೆ ರಾಜಮಾವು ಹೆಸರು ಕೇಳಿ ಸಂತೋಷವಾಯಿತು. ಎರಡು ಹಣ್ಣುಗಳನ್ನು ಎತ್ತಿಕೊಂಡು ಒಂದನ್ನು ರಾಣಿಗೆ ಕೊಟ್ಟು ಇನ್ನೊಂದನ್ನು ತಾ ತಿನ್ನತೊಡಗಿದ. ರಾಜನ ಔದಾರ್ಯ ಕಂಡ ಪ್ರಜೆಗಳು 'ರಾಜಮಾವುಗೆ ಜೈ' ಎಂದರು. ಹೀಗೆ ರಾಜಮಾವು ಅರಮನೆಯ ಅಂಗಳ ದಾಟಿ ಪ್ರಜೆಗಳ ಹೊಟ್ಟೆ ತುಂಬಿಸಿತು.



## ಕುಂಚ ಪ್ರಪಂಚ

**ಹರಿ ಸುಂದರ್ ಕೌಶಿಕ್**
6ನೇ ತರಗತಿ,
ಎಸ್‌ಹೆಚ್‌ಪಿ. ಸ್ಕೂಲ್,
ಬೆಂಗಳೂರು







**ಮಾನಸಿ ಎಂ.**
7ನೇ ತರಗತಿ, ಡೆವಿನ್ ಸ್ಕೂಲ್, ಬೆಂಗಳೂರು



**ಕೃತಿ ಪುರಾಣಿಕ್**
6ನೇ ತರಗತಿ
ಶ್ರೀ ಕುಮಾರನ್ಸ್ ಚಿಲ್ಡ್ರನ್ಸ್ ಹೋಮ್, ಬೆಂಗಳೂರು

